155 ನೇ 6 ನಿ:72 = (100) 4RR 2404

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ಎಲ್. ಭೋಜೇಗೌಡ (ನೈರುತ್ಯ ಶಿಕ್ಷಕರ ಚುನಾವಣಾ ಕ್ಷೇತ್ರ) ಇವರು ನಿಯಮ 72ರಡಿಯಲ್ಲಿ ಕೇಳಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ:**

**ಸೂಚನೆ:**

ರಾಜ್ಯದ ಕಾರ್ಮಿಕ ಇಲಾಖೆಯಲ್ಲಿ ಹಲವು ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಡಿ ದರ್ಜೆ ಮತ್ತು ವಾಹನ ಚಾಲಕರನ್ನು ನೇಮಿಸಿಕೊಳ್ಳಲಾಗಿದ್ದು, ಸದರಿಯವರುಗಳು ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಸದರಿಯವರುಗಳಿಗೆ ಸರಿಯಾದ ಕ್ರಮದಲ್ಲಿ, ಕಾಲಕ್ರಮೇಣ ವೇತನ ಮತ್ತು ಇತರೆ ಸೌಲಭ್ಯಗಳಾದ ಇ.ಎಸ್ ಐ ಮತ್ತು ಇ.ಪಿ.ಎಫ್ ಪಾವತಿ ಆಗದೇ ಇರುವುದು ಶೋಚನೀಯ ಸಂಗತಿಯಾಗಿದೆ. ಇದರಿಂದ ನೌಕರರ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿರುತ್ತದೆ. ಸದರಿ ನೌಕರರಿಗೆ ಕಾಲಕ್ರಮೇಣ ಸೌಲಭ್ಯಗಳು ದೊರಕದೇ ಇರುವುದಕ್ಕೆ ಹಲವು ಏಜೆನ್ಸಿಗಳು ಕಾರಣಗಳಾಗಿದ್ದು, ಈ ಏಜೆನ್ಸಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಕಾರ್ಮಿಕ ಇಲಾಖೆಯಲ್ಲಿ ಹಲವು ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಸದರಿ ನೌಕರರುಗಳಿಗೆ ಕಾಲಕ್ರಮೇಣ ವೇತನ, ಇ.ಎಸ್‌ಐ ಮತ್ತು ಇ.ಪಿಎಫ್ ಪಾವತಿ ಮಾಡುವಂತೆ ಹಾಗೂ ಇದಕ್ಕೆ ಕಾರಣಕರ್ತರಾದ ಏಜೆನ್ಸಿಗಳ ವಿರುದ್ಧ ಕಠಿಣ ಕ್ರಮತೆಗೆದುಕೊಳ್ಳುವ ಸಂಬಂಧ ಮಾನ್ಯ ಕಾರ್ಮಿಕ ಸಚಿವರ ಗಮನ ಸೆಳೆಯುವ ಕುರಿತು.

**ಗಮನ ಸೆಳೆಯುವ ಸೂಚನೆಗೆ ಉತ್ತರ:-**

1. ಕಾರ್ಮಿಕ ಇಲಾಖೆಯಲ್ಲಿ ಗ್ರೂಪ್ 'ಡಿ' ನೌಕರರನ್ನು ಹಾಗೂ ವಾಹನ ಚಾಲಕರನ್ನು ಟೆಂಡರ್ ಮುಖಾಂತರ ಏಜೆನ್ಸಿಯ ಮೂಲಕ ನೇಮಕ ಮಾಡಿಕೊಳ್ಳಲಾಗುವುದು.

2. ಸದರಿ ಏಜೆನ್ಸಿಯವರ ಸೇವೆಯನ್ನು ಪಡೆಯುವ ಪ್ರಾರಂಭದಲ್ಲಿ ಇಲಾಖೆ ಹಾಗೂ ಏಜೆನ್ಸಿಯ ನಡುವೆ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು. ಸದರಿ ಹೊರಗುತ್ತಿಗೆ ನೌಕರರಿಗೆ ಪ್ರತಿ ಮಾಹೆಯ ವೇತನವನ್ನು ಪಾವತಿ ಮಾಡಲು, ಏಜೆನ್ಸಿಯವರು ನೀಡುವ ವೇತನ ಬಿಲ್ಲನ್ನು ಇಲಾಖೆಗೆ ಸಲ್ಲಿಸುವಾಗ, ಸಿಬ್ಬಂದಿಗಳಿಗೆ ವೇತನ ಪಾವತಿ ಮಾಡಲಾಗಿರುವ ಬಗ್ಗೆ ರಶೀದಿ, ವೇತನ ಪಾವತಿ ವಹಿ, ಇ.ಎಸ್.ಐ, ಭವಿಷ್ಯ ನಿಧಿ ವಂತಿಕೆ ಬಗ್ಗೆ ಮಾಹಿತಿಗಳನ್ನು ಕಡ್ಡಾಯವಾಗಿ ಕಾರ್ಯವ್ಯಾಪ್ತಿಯ ಹಿರಿಯ ಕಾರ್ಮಿಕ ನಿರೀಕ್ಷಕರು ಅಥವಾ ಕಾರ್ಮಿಕ ಇಲಾಖೆಯ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು ಎಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಅದರಂತೆ, ಪ್ರತಿ ಮಾಹೆಯ ವೇತನ ಬಿಲ್ಲನ್ನು ಆಯಾ ಏಜೆನ್ಸಿಗಳಿಗೆ ನಿಯಮಾನುಸಾರ ಇ.ಎಸ್.ಐ ಮತ್ತು ಇ.ಪಿ.ಎಫ್ ಕಟಾವಣೆ ಮಾಡಿರುವ ಬಗ್ಗೆ ಖಾತರಿಪಡಿಸಿಕೊಂಡು ಬಿಲ್ಲಿನ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

3. ಒಂದು ವೇಳೆ ಸದರಿ ಏಜೆನ್ಸಿಯವರು ಹೊರಗುತ್ತಿಗೆ ನೌಕರರ ಇ.ಎಸ್.ಐ ಮತ್ತು ಇ.ಪಿ.ಎಫ್ ಅನ್ನು ಪಾವತಿ ಮಾಡದೆ ಇರುವುದು ಕಂಡು ಬಂದಲ್ಲಿ, ಅಥವಾ ವೇತನ ಪಾವತಿಯು ವಿಳಂಬವಾದಲ್ಲಿ ಮುಂದಿನ ತಿಂಗಳ ಬಿಲ್ಲಿನ ಮೊತ್ತದಲ್ಲಿ ಶೇಕಡ 10 ರಷ್ಟು ಮೊತ್ತವನ್ನು ಕಡಿತಗೊಳಿಸಲಾಗುವುದು.

4. ಇ.ಎಸ್.ಐ ಮತ್ತು ಇ.ಪಿ.ಎಫ್ ಪಾವತಿಯಾಗದೇ ಇರುವ ಕುರಿತು ಕಾರ್ಮಿಕ ಇಲಾಖೆಯ ಹೊರಗುತ್ತಿಗೆ ನೌಕರರಿಂದ ಈವರೆಗೂ ಯಾವುದೇ ದೂರು ಸ್ವೀಕೃತವಾಗಿರುವುದಿಲ್ಲ.

ಸಂಖ್ಯೆ: ಕಾಇ 114 ಎಲ್ ಡಬ್ಲ್ಯೂಎ 2025

(ಸಂತೋಷ್ ಎಸ್ ಲಾಡ್)
ಕಾರ್ಮಿಕ ಸಚಿವರು